ಶ್ರೀ ಧರ್ಮಸಿಂಗ್ : ಮಾನ್ಯ ಸದಸ್ಯರು ಇದರ ಬಗ್ಗೆ ಪ್ರತ್ಯೇಕವಾದ ಪ್ರಶ್ನೆಯನ್ನು ಕೇಳಿ, ಕರ್ನಾಟಕ ರಾಜ್ಯದಲ್ಲಿ 1990ನೇ ಇಸವಿಯಿಂದ ಇಲ್ಲಿಯವರೆಗೆ ಪ್ರತಿವರ್ಷ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ ಎನ್ನುವ ಬಗ್ಗೆ ಮತ್ತು ಈ ವರ್ಷ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ ಎನ್ನುವ ಬಗ್ಗೆ ಪ್ರಶ್ನೆಯನ್ನು ಕೇಳಿದರೆ ವಿವರಣೆಯನ್ನು ಕೊಡುತ್ತೇವೆ.

ಶ್ರೀ ಮಂಜುನಾಥ ಸಿ. ಕುನ್ನೂರ್ : ಮಾನ್ಯ ಉಪಾಧ್ಯಕ್ಷರೆ, ಅತಿವೃಷ್ಟಿಯಿಂದ ಬೆಳೆ ನಾಶವಾಗಿರುವುದಕ್ಕೆ ಎಲ್ಲಾ ಜಿಲ್ಲೆಗಳಿಗೆ ಹಣವನ್ನು ಕಳಿಸಲಾಗಿತ್ತು. ಆದರೆ ನಮ್ಮ ಧಾರವಾಡ ಜಿಲ್ಲೆಗೆ ಒಂದು ಸುತ್ತೋಲೆಯು ಬಂದಿದೆ. ಅದೇನೆಂದರೆ ಯಾವುದೇ ರೈತನಿಗೆ ಒಂದು ನಾಲ್ಕೈದು ಎಕರೆ ಜಮೀನು ಇದ್ದರೆ ಅದರಲ್ಲಿ ಕನಿಷ್ಟ ಪಕ್ಷ ಎಪ್ಪತ್ತೈದು ಭಾಗ ನಾಶವಾಗಿದ್ದರೆ ಮಾತ್ರ ಅಂಥ ರೈತರು ಬೆಳೆಯ ಪರಿಹಾರವನ್ನು ಪಡೆಯಲು ಸಾಧ್ಯವೆಂದು ಸುತ್ತೋಲೆ ಬಂದಿದೆ. ಈ ಸುತ್ತೋಲೆಯಿಂದ ಯಾವ ರೈತನಿಗೆ ಹಾನಿಯಾಗಿದ್ದು ಬೆಳೆಯ ಪರಿಹಾರ ದೊರಕದೇ ಇರತಕ್ಕ ಪರಿಸ್ಥಿತಿ ಬಂದಿದೆ. ಆದ್ದರಿಂದ ಮಾನ್ಯ ಸಚಿವರು ಈ ರೀತಿ ಏನು ಸುತ್ತೋಲೆಯನ್ನು ಕಳಿಸಿದ್ದಾರೋ ಅದನ್ನು ವಾಪಸ್ ತೆಗೆದುಕೊಂಡು ಎಷ್ಟು ನಷ್ಟವಾಗಿರುತ್ತದೆಯೋ ಅಷ್ಟು ಬೆಳೆಯ ಪರಿಹಾರವನ್ನು ಕೊಡಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ : ಮೊದಲು ಪ್ರತಿ ಎಕರೆಗೆ ಐದುನೂರು ರೂಪಾಯಿಗಳ ಪರಿಹಾರವನ್ನು ಕೊಡುತ್ತಿದ್ದೇವು, ಆಗ ಜಿಲ್ಲಾಧಿಕಾರಿಗಳಿಗೆ ಸ್ವಲ್ಪ ಅಡಚಣೆಯಾಗುತ್ತಿತ್ತು. ಈಗ ಆ ಅಡಚಣೆಯನ್ನು ನಿವಾರಣೆ ಮಾಡಿದ್ದೇವೆ. ಧಾರವಾಡ ಜಿಲ್ಲೆಯಲ್ಲಿ ಸಹ ಸಾಕಷ್ಟು ಪರಿಹಾರವನ್ನು ಇಲ್ಲಿಯವರೆಗೆ ರೈತರಿಗೆ ಕೊಟ್ಟಿದ್ದೇವೆ. ಪ್ರತಿ ಎಕರೆಗೆ 500 ರೂ.ಗಳಂತೆ ಕೊಟ್ಟಿರುವ ಪರಿಹಾರದ ಒಟ್ಟು ಮೊತ್ತ ಮೂರು ಕೋಟಿ ಐವತ್ತೈದು ಲಕ್ಷವನ್ನು ಕರ್ನಾಟಕ ರಾಜ್ಯದ ಬೇರೆ ಬೇರೆ ಕಡೆಗೆ ಕೊಟ್ಟಿದ್ದೇವೆ.

ಶ್ರೀ ಮಂಜುನಾಥ ಸಿ. ಕುನ್ನೂರ್ : ಪರಿಹಾರವನ್ನು ಕೊಡುತ್ತಿರುವುದು ಸರಿ. ಆದರೆ ಯಾರಿಗೆ ಮುಕ್ಕಾಲು ಭಾಗ ನಷ್ಟವಾಗಿರುತ್ತದೆಯೋ ಅಂಥವರು ಮಾತ್ರ ಇದರ ಫಲಾನುಭವಿಗಳಾಗಲು ಅರ್ಹರು ಎನ್ನತಕ್ಕ ನಿರ್ಭಂಧವನ್ನು ಮಾಡಿದ್ದೀರಿ. ಆ ನಿರ್ಬಂಧವನ್ನು ತೆಗೆದು ಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ : ಅದರ ಬಗ್ಗೆ ಸಹ ಈಗಾಗಲೆ ಹೇಳಿದ್ದೇನೆ. ಇದಕ್ಕೆ ಇರತಕ್ಕ ಅಡ್ಡಿಯನ್ನು ಕೂಡ ದೂರ ಮಾಡಿದ್ದೇವೆ.

ರಾಜ್ಯದಲ್ಲಿರುವ ಬೀಡಿ ಕಾರ್ಮಿಕರ ಸಂಖ್ಯೆ.

563 - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯಾದ್ಯಂತ ಇರುವ ಬೀಡಿ ಕಾರ್ಮಿಕರ ಸಂಖ್ಯೆ ಎಷ್ಟು.

ಆ) ಅವರಿಗೆ ಸರ್ಕಾರದಿಂದ ದೊರಕುವ ಸೌಲಭ್ಯ ಎಷ್ಟು?

ಇ) ಮಂಡ್ಯ ಜಿಲ್ಲೆಯಲ್ಲಿ ಬೀಡಿ ಕಾರ್ಮಿಕರುಗಳನ್ನು ಗುರುತಿಸಲಾಗಿದೆಯೇ?

ಈ) ಹಾಗಿದ್ದಲ್ಲಿ, ಅವರ ಸಂಖ್ಯೆ ಎಷ್ಟು?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು) :

ಅ) ರಾಜ್ಯಾದ್ಯಂತ 2,86,462 ಬೀಡಿ ಕಾರ್ಮಿಕರಿದ್ದಾರೆ.

ಆ) 1) ವೈದ್ಯಕೀಯ ಸೌಲಭ್ಯ

2) ಬೋನಸ್

3) ರಜೆಯ ಸಂಬಳ

4) ರಾಷ್ಟ್ರೀಯ ಹಬ್ಬದ ರಜಾ

5) ಹೆರಿಗೆ ಸೌಲಭ್ಯ

6) ಆರ್ಥಿಕವಾಗಿ ಹಿಂದುಳಿದ ಬೀಡಿ ಕಾರ್ಮಿಕರಿಗೆ ಮನೆ ಕಟ್ಟಲು ಧನ ಸಹಾಯ.

7) ಸಾಮೂಹಿಕ ವಿಮಾ ಯೋಜನೆ.

8) ಬೀಡಿ ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿ ವೇತನ ಹಾಗೂ ಅವರ ಮಕ್ಕಳಿಗೆ ಸಮವಸ್ತ್ರ (ಪ್ರಾಥಮಿಕ ಶಾಲೆಯವರೆಗೂ-ಕೇಂದ್ರ ಕಲ್ಯಾಣ ಸಂಸ್ಥೆಯಿಂದ)

ಇ) ಹೌದು

ಈ) 85.

ಶ್ರೀ ಎಂ.ಎಸ್. ಆತ್ಮಾನಂದ : ಸನ್ಮಾನ್ಯ ಉಪಾಧ್ಯಕ್ಷರೇ, ರಾಜ್ಯಾದ್ಯಂತ ಸುಮಾರು ಎರಡು ಲಕ್ಷದ ಎಂಬತ್ತೇಳು ಸಾವಿರ ಬೀಡಿ ಕಾರ್ಮಿಕರು ಇದ್ದಾರೆಂದು ಉತ್ತರದಲ್ಲಿ ಹೇಳಿದ್ದಾರೆ. ಇವರುಗಳಿಗೆ ಕೊಡತಕ್ಕ ಸೌಲಭ್ಯಗಳ ವಿವರಣೆಯನ್ನು ಸಹ ಇಲ್ಲಿ ಕೊಟ್ಟಿದ್ದಾರೆ. ಸರ್ಕಾರ ಇದರ ಸಲುವಾಗಿ ಒಟ್ಟಾರೆ ವಾರ್ಷಿಕವಾಗಿ ಎಷ್ಟು ಖರ್ಚು ಮಾಡುತ್ತದೆ ಎಂಬುದನ್ನು ಕೇಳಬಯಸುತ್ತೇನೆ. ಮತ್ತು ಮಂಡ್ಯ ಜಿಲ್ಲೆಯಲ್ಲಿ ಕೇವಲ ಎಂಭತ್ತೈದು ಬೀಡಿ ಕಾರ್ಮಿಕರನ್ನು ಗುರುತಿಸಲಾಗಿದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಆದರೆ ಮಂಡ್ಯ ಜಿಲ್ಲೆಯಾದ್ಯಂತ ಸಹಸ್ರಾರು ಜನರು ಬೀಡಿ ಕಾರ್ಮಿಕರು ಇದ್ದು, ಅವರುಗಳು ಆರ್ಥಿಕವಾಗಿ ಬಹಳ ತೊಂದರೆಗೆ ಒಳಗಾಗಿದ್ದಾರೆ. ಇವರನ್ನೂ ಕೂಡ ಗುರುತಿಸತಕ್ಕ ಕೆಲಸವನ್ನು ಯಾವಾಗ ಕೈಗೊಳ್ಳುತ್ತೀರಿ ಮತ್ತು ಈ ಸೌಲಭ್ಯಗಳನ್ನು ಅವರಿಗೂ ಒದಗಿಸುತ್ತೀರಾ ಎಂದು ಕೇಳಬಯಸುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ :ಮಾನ್ಯ ಅಧ್ಯಕ್ಷರೇ, ಬೀಡಿ ಕಾರ್ಮಿಕರಿಗೆ ಬಹಳಷ್ಟು ಸವಲತ್ತುಗಳನ್ನು ಕೊಟ್ಟಿದ್ದೇವೆ. ಕರ್ನಾಟಕದಲ್ಲಿ 2,86,462 ಬೀಡಿ ಕಾರ್ಮಿಕರು ಪ್ರಾವಿಡೆಂಟ್ ಫಂಡ್ಗೆ ನೊಂದಾಯಿಸಿದ್ದಾರೆ. ಅದರಲ್ಲಿ ಸಾಧಾರಣವಾಗಿ 6 ಸಾವಿರ ಬೀಡಿ ಕಾರ್ಮಿಕರು ಕರ್ನಾಟಕದಲ್ಲಿ ಇದ್ದಾರೆ. ಮಂಡ್ಯ ಜಿಲ್ಲೆಯಲ್ಲಿ ಪ್ರಾವಿಡೆಂಟ್ ಫಂಡ್ಗೆ 85 ಜನ ಕಾರ್ಮಿಕರು ನೊಂದಾವಣೆಯಲ್ಲಿ ಇದ್ದಾರೆಂದು ಗೊತ್ತಾಗಿದೆ. ಅಲ್ಲೂ ಸಹ ಸಣ್ಣ ಸಣ್ಣ ಬೀಡಿ ಮಾಲೀಕರು ಬೀಡಿ ಉತ್ಪಾದನೆ ಮಾಡುವಾಗ ಐಡೆಂಟಿಕಾರ್ಡ್ ಕೊಡುವುದಕ್ಕೆ ಹೇಳಿದ್ದೇವೆ. ನಾವು ಇದಕ್ಕೆ ಬಹಳಷ್ಟು ಸಮಯದಿಂದ ಕೆಲಸ ಮಾಡುತ್ತಿದ್ದೇವೆ. ಲೇಬರ್ ಡಿಪಾರ್ಟಿಮೆಂಟಿನಿಂದ ಸರ್ವೆ ಮಾಡಿಸುವುದಕ್ಕೆ ನಿಶ್ಚಯ ಮಾಡಿದ್ದೇವೆ. ಏಕೆಂದರೆ ಬಡ ಕಾರ್ಮಿಕರಿಗೆ ಈ ಎಲ್ಲಾ ಸವಲತ್ತುಗಳು ಸಿಗಬೇಕಾದರೆ ನಾವು ಅವರಿಗೆ ಐಡೆಂಟಿಟಿ ಕಾರ್ಡ್ ಕೊಡಬೇಕು. ಕೇಂದ್ರ ಸರ್ಕಾರದಿಂದ ಲೇಬರ್ ವೆಲ್ಫೇರ್ ಕಮೀಷನ್ ಆಫೀಸ್ ಎಂದು ಬೆಂಗಳೂರಿನಲ್ಲಿದೆ. ಇದರ ಮುಖಾಂತರ ಐಡೆಂಟಿಟಿ ಕಾರ್ಡ್ ಕೊಡುತ್ತಾ ಬಂದಿದ್ದೇವೆ. ಇನ್ನು ಮುಂದೆ ಲೇಬರ್ ಡಿಪಾರ್ಟ್ಮೆಂಟ್ನಿಂದಲೂ ಸಹ ಐಡೆಂಟಿಟಿ ಕಾರ್ಡ್ ಕೊಡಬೇಕೆಂದು ನಿಶ್ಚಯ ಮಾಡಿದ್ದೇವೆ. ಅದೇ ಪ್ರಕಾರ ಮಂಡ್ಯ ಜಿಲ್ಲೆಯಲ್ಲಿ ಸರ್ವೆ ಮಾಡಿ ಎಷ್ಟು ಜನ ಬೀಡಿ ಕಾರ್ಮಿಕರು ಇದ್ದಾರೆ. ಅವರಿಗೆ ಐಡೆಂಟಿಟಿ ಕಾರ್ಡ್ ಕೊಡುವ ಹಾಗೆ ನೋಡಿ ಕೊಳ್ಳುತ್ತೇವೆ.

ಶ್ರೀ ಎಂ.ಎಸ್. ಆತ್ಮಾನಂದ : 2 ಲಕ್ಷ 87 ಸಾವಿರ ಜನರಿಗೆ ಈ ಸೌಲಭ್ಯವನ್ನು ಕೊಡುವುದಕ್ಕೆ ವಾರ್ಷಿಕವಾಗಿ ಎಷ್ಟು ಹಣವನ್ನು ಖರ್ಚು ಮಾಡುತ್ತಿದೆ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ :ಕೇಂದ್ರದಿಂದ ನಮಗೆ ಈ ಎಲ್ಲಾ ಹಣ ಬರುತ್ತದೆ. ಕರ್ನಾಟಕ ಸರ್ಕಾರ ಯಾವ ಹಣವನ್ನು ಬೀಡಿ ಕಾರ್ಮಿಕರ ವೆಲ್ಫೇರ್ಗೋಸ್ಕರವಾಗಿ ಖರ್ಚು ಮಾಡುವುದಿಲ್ಲ. ಈ ವರ್ಷ 53 ಲಕ್ಷ ರೂ.ಗಳನ್ನು ಸ್ಕಾಲರ್ಷಿಪ್ ಮುಖಾಂತರ ಕೊಟ್ಟಿದ್ದಾರೆ. ಈ ವರ್ಷವೇ ಇನ್ನು 30ಲಕ್ಷ ರೂ.ಗಳನ್ನು ಮಂಜೂರು ಮಾಡುತ್ತೇವೆಂದು ಹೇಳಿದ್ದಾರೆ. ಇದುವರೆಗೂ ಆ ಹಣ ಬಂದಿಲ್ಲ. ಅದೇ ರೀತಿ ಮನೆಗಳನ್ನು ಕಟ್ಟುವುದಕ್ಕೆ

ನಾವು ಬೇಕಾದಷ್ಟು ಹಣವನ್ನು ಕೊಟ್ಟಿದ್ದೇವೆ. ಆದರೆ ಈ ವರ್ಷ ಕೊಡುವುದಕ್ಕೆ ಸಾಧ್ಯವಾಗಲಿಲ್ಲ. ಏಕೆಂದರೆ ಯಾರು ಹೊಸ ಮನೆಗಳನ್ನು ಕಟ್ಟಲಿಲ್ಲ. ಅದರ ಬಗ್ಗೆ ಇಷ್ಟರವರೆಗೂ ಬೇಡಿಕೆ ಬರಲಿಲ್ಲ. ಇದುವರೆಗೂ 1,435 ಮನೆಗಳನ್ನು ಕೊಟ್ಟಿದ್ದೇವೆ, ಸಬ್ಸಿಡಿ ರೂಪದಲ್ಲಿ ಹಣವನ್ನು ಕೊಟ್ಟಿದ್ದೇವೆ.

ಕಳ್ಳಂಬೆಳ್ಳ ಕ್ಷೇತ್ರದಲ್ಲಿ ಅನಧಿಕೃತ ಭೂಮಿಯ ಸಕ್ರಮ.

693 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಕಂದಾಯ ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ಕಳ್ಳಂಬೆಳ್ಳ ಕ್ಷೇತ್ರದಲ್ಲಿ ಬರುವ 3 ತಾಲ್ಲೂಕಿನ ಭಾಗಗಳಿಂದಾಗಿ ಅಕ್ರಮವಾಗಿ ಸಾಗುವಳಿ ಮಾಡುತ್ತಿರುವ ಜಮೀನುಗಳನ್ನು ಸಕ್ರಮಗೊಳಿಸುವಂತೆ ಬಂದಿರುವ ಅರ್ಜಿಗಳೆಷ್ಟು?*

2) *ಅವುಗಳಲ್ಲಿ ಇದುವರೆವಿಗೂ ವಿಲೇವಾರಿ ಆಗಿರುವ ಅರ್ಜಿಗಳೆಷ್ಟು ಹಾಗೂ ಎಷ್ಟು ಅರ್ಜಿಗಳಿಗೆ ಹಕ್ಕು ಪತ್ರಗಳನ್ನು ವಿತರಿಸಲಾಗಿದೆ?*

3) *ಶಿರಾ ತಾಲ್ಲೂಕಿನಲ್ಲಿ ಸಮಿತಿಯು ಇದುವರೆವಿಗೂ ಒಂದು ಸಭೆಯನ್ನು ಕರೆಯದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

4) *ಹಾಗಿದ್ದಲ್ಲಿ, ಕಳ್ಳಂಬೆಳ್ಳ ಕ್ಷೇತ್ರದಲ್ಲಿ ಉಳಿದಿರುವ ಅರ್ಜಿಗಳ ವಿಲೇವಾರಿಗಾಗಿ ಪ್ರತ್ಯೇಕ ಹೆಚ್ಚುವರಿ ಸಮಿತಿಯನ್ನು ನೇಮಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?*

ಶ್ರೀ ಧರ್ಮಸಿಂಗ್ (ಕಂದಾಯ ಮತ್ತು ಸಮಾಜ ಕಲ್ಯಾಣ ಸಚಿವರು) :

1) ಕಳ್ಳಂಬೆಳ್ಳ ಕ್ಷೇತ್ರದಲ್ಲಿ ಬರುವ 3 ತಾಲ್ಲೂಕಿನ ಭಾಗಗಳಿಂದಾಗಿ ಬಂದಿರುವ ಅರ್ಜಿಗಳ ಸಂಖ್ಯೆ :

1) ಹುಳಿಯಾರು (ಚಿಕ್ಕನಾಯಕನಹಳ್ಳಿ ತಾಲ್ಲೂಕು)	-	5683
2) ಹಾಗಲವಾಡಿ (ಗುಬ್ಬಿ ತಾಲ್ಲೂಕು)	-	2895
3) ಕಳ್ಳಂಬೆಳ್ಳ ಮತ್ತು ಬುಕ್ಕಾಪಟ್ಟಣ (ಶಿರಾ ತಾಲ್ಲೂಕು)	-	5371
ಒಟ್ಟು		13949

2) ಇದುವರೆವಿಗೆ ಆಗಿರುವ ವಿಲೇವಾರಿ

1) ಹುಳಿಯಾರು (ಚಿಕ್ಕನಾಯಕನಹಳ್ಳಿ ತಾಲ್ಲೂಕು)	-	299
2) ಹಾಗಲವಾಡಿ (ಗುಬ್ಬಿ ತಾಲ್ಲೂಕು)	-	831
3) ಕಳ್ಳಂಬೆಳ್ಳ ಮತ್ತು ಬುಕ್ಕಾಪಟ್ಟಣ (ಶಿರಾ ತಾಲ್ಲೂಕು)		ಇಲ್ಲ
ಒಟ್ಟು		1130

ಇದುವರೆವಿಗೂ ಯಾವುದೇ ಹಕ್ಕು ಪತ್ರವನ್ನು ಹಂಚಿರುವುದಿಲ್ಲ.

3) ಹೌದು.

4) ಕರ್ನಾಟಕ ಭೂಕಂದಾಯ ಕಾಯ್ದೆ ಕಲಂ 94ಎ ಅಡಿಯಲ್ಲಿ, ಒಂದು ತಾಲ್ಲೂಕಿಗೆ ಒಂದು ಸಮಿತಿಗಿಂತ ಹೆಚ್ಚಾಗಿ ರಚಿಸಲು ಈಗ ಅವಕಾಶವಿಲ್ಲ. ಆದರೆ ವಿಲೇವಾರಿ ಆಗದೆ ಉಳಿದಿರುವ ಪ್ರಕರಣಗಳು ಬಹಳಷ್ಟು ಇರುವ ಕಡೆಗಳಲ್ಲಿ ಇನ್ನೊಂದು ಹೆಚ್ಚುವರಿ ಸಮಿತಿಯನ್ನು ರಚಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಟಿ.ಬಿ. ಜಯಚಂದ್ರ : ನನ್ನ ಕ್ಷೇತ್ರದಲ್ಲಿ ಅಕ್ರಮವಾಗಿ ಸಾಗುವಳಿ ಮಾಡುತ್ತಿರುವ ಜಮೀನುಗಳನ್ನು ಸಕ್ರಮಗೊಳಿಸುವುದಕ್ಕೋಸ್ಕರ 14 ಸಾವಿರ ಅರ್ಜಿಗಳು ಬಂದಿವೆ. ಇಲ್ಲಿಯವರೆಗೆ ಒಂದು ಸಾವಿರ ಅರ್ಜಿಗಳು ವಿಲೇವಾರಿಯಾಗಿರತಕ್ಕಂಥಾದ್ದು. ಆದರೆ ಇದುವರೆಗೂ ಹಕ್ಕುಪತ್ರಗಳನ್ನು ಒಂದಕ್ಕೂ ಕೊಡುವುದಕ್ಕಾಗಲಿಲ್ಲವೆಂದು ತಮ್ಮ ಉತ್ತರದಲ್ಲಿ ಹೇಳಿದ್ದೀರಿ. ಇದಕ್ಕಾಗಿ ಹೆಚ್ಚುವರಿ ಸಮಿತಿಯನ್ನು ರಚನೆ ಮಾಡುವ